International Journal of Kannada Research
www.kannadajournal.com

**ISSN: 2454–5813**
IJSR 2017; 3(4): 178-183
© 2017 IJKS
www.kannadajournal.com
Received: 13-08-2017
Accepted: 18-09-2017

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

**Correspondence**
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಅ.ನ.ಕೃ ಅವರ ವಿಮರ್ಶೆಯ ಸ್ವರೂಪ

**ಡಾ. ಕೆ ಶಿವಾನಂದಯ್ಯ**

**ಪೀಠಿಕೆ**

ಕನ್ನಡ ಪ್ರಗತಿಶೀಲ ಸಾಹಿತ್ಯ ವಿಮರ್ಶೆಯನ್ನು ರೂಪಿಸಿದವರಲ್ಲಿ ಅ.ನ.ಕೃಷ್ಣರಾಯರು ಒಬ್ಬರು. ಪ್ರಗತಿಶೀಲ ಚಳವಳಿಯ ಕಾಲಕ್ಕಾಗಲೇ ವಿಮರ್ಶೆಯ ಕಲ್ಪನೆಯಿತ್ತು. ಸಾಹಿತ್ಯ ಕೃತಿಗಳಂತೆ ವಿಮರ್ಶೆಯೂ ಸಹ ಸಾಮಾಜಿಕ ಬದ್ಧತೆಯಿಂದ ಕೂಡಿರಬೇಕೆಂಬುದು ಪ್ರಗತಿಶೀಲ ಸಾಹಿತ್ಯ ವಿಮರ್ಶೆಯ ಮುಖ್ಯ ನಿಲುವಾಗಿತ್ತು. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಅ.ನ.ಕೃ ಅವರ ವಿಮರ್ಶಾ ಕೃತಿಗಳನ್ನು ಅಧ್ಯಯನ ಮಾಡುವ ಮೂಲಕ ಅವರ ವಿಮರ್ಶೆಯ ಸ್ವರೂಪವನ್ನು ಗುರುತಿಸುವ ಪ್ರಯತ್ನ ಮಾಡಿದೆ. ಅ.ನ.ಕೃ ಅವರ ವಿಮರ್ಶಾ ಕೃತಿಗಳೆಂದರೆ; 'ಸಾರ್ಥಕ ಸಾಹಿತ್ಯ' (1966), 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' (1950), 'ಸಾಹಿತ್ಯ ಮತ್ತು ಕಾಮಪ್ರಚೋದನೆ' (1952), 'ಸಾಹಿತ್ಯ ಮತ್ತು ಯುಗಧರ್ಮ' (1952), 'ಸಾಹಿತ್ಯ ಸಮಾರಾಧನೆ' (1959), 'ಸಂಸ್ಕೃತಿಯ ವಿಶ್ವರೂಪ' (1955), 'ಸಾಹಿತ್ಯ ಮತ್ತು ಜೀವನ' (1944), 'ಬಸವಣ್ಣನವರ ಅಮೃತವಾಣಿ' (1943), 'ನಾಟಕ ಕಲೆ' (1957), 'ಸಜೀವ ಸಾಹಿತ್ಯ' (1946), 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' (1943).

'ಸಾಹಿತ್ಯ ಸಮಾರಾಧನೆ' (1959) ಕೃತಿಯಲ್ಲಿ ಸಾಹಿತ್ಯ ಮತ್ತು ಕನ್ನಡ ನಾಡಿಗೆ ಸಂಬಂಧಿಸಿದ ಏಳು ಲೇಖನಗಳಿವೆ. ನವೋದಯ ಸಾಹಿತ್ಯ ಲಕ್ಷಣಗಳನ್ನು ಗುರುತಿಸುತ್ತಾ, ಅವರು ಮಾಸ್ತಿಯವರ ಕಥೆಗಳ ಬಗ್ಗೆ ಹೀಗೆ ಹೇಳುತ್ತಾರೆ; "ಪುಟ್ಟಣ್ಣನವರ ಜಾಡಿನಲ್ಲೇ ನಡೆದ ಶ್ರೀನಿವಾಸರ ಕೆಲವು ಸಣ್ಣಕಥೆಗಳು ಮಧ್ಯಮ ವರ್ಗದ ಕನ್ನಡಿಗರ ಜೀವನದ ಸುಂದರ ಚಿತ್ರಗಳ ರನ್ನಗನ್ನಡಿಯಾಯಿತು. ಜನಸಾಮಾನ್ಯರ ತಿಳಿವಿಗೆ ಎಟುಕುವಂಥ ಭಾಷೆ, ಅಪೂರ್ವ ಶೋಭೆ, ಶಕ್ತಿ, ಬಿಗಿಯನ್ನು ತಂದುಕೊಟ್ಟಿತು. ....ಇಂಗ್ಲಿಷ್ ಶಿಕ್ಷಣ ಅವರ ಪ್ರತಿಭೆಯ ವಿಕಸನಕ್ಕೆ ನೆರವಾಯಿತಾದರೂ, ಅವರ ಕೃತಿಗಳು ಕನ್ನಡದ ಜಾಯಮಾನವನ್ನು ಎಳ್ಳಷ್ಟೂ ಉಪೇಕ್ಷಿಸಲಿಲ್ಲ."[1]. ಹೀಗೆ ನವೋದಯಕ್ಕೆ ಪ್ರತಿಕ್ರಿಯೆಯಾಗಿ ಬಂದ ಪ್ರಗತಿಶೀಲ ಚಳವಳಿಯ ಅ.ನ.ಕೃ ಅವರು ಹಿಂದಿನ ಸಾಹಿತ್ಯ ಪಂಥದ ಬಗ್ಗೆ ಪೂರ್ವಾಗ್ರಹಪೀಡಿತರಾಗಲಿಲ್ಲ. ಹಾಗೆಯೇ ಪ್ರಗತಿಶೀಲ ಚಳವಳಿಯನ್ನು ಕುರಿತು ಹೇಳುವ 'ಪ್ರಗತಿಶೀಲ ಚಳುವಳಿ ಜೀವಂತವಾಗಿದ್ದ ನಾಲ್ಕು ವರ್ಷಗಳು (1942-1947) ಮಹೋನ್ನತವಾದ

ಸಾಹಿತ್ಯ ಸೃಷ್ಟಿಯಾಗದಿದ್ದರೂ, ಸಾಹಿತ್ಯದ ಕ್ಷೇತ್ರ ವಿಶಾಲವಾಯಿತು. ಮುಂದೆ ಕನ್ನಡ ಸಾಹಿತ್ಯಕ್ಕೆ ಹಲವು ಉತ್ತಮ ಕಾಣಿಕೆಗಳನ್ನರ್ಪಿಸಲಿದ್ದ ಅನೇಕ ಲೇಖಕರನ್ನು ಬೆಳಕಿಗೆ ತಂದಿತು”[2]. ಎಂಬ ಮಾತೂ ಸರಿಯೆನಿಸುತ್ತದೆ. ಹಾಗೆಯೇ “ಸಾಹಿತ್ಯ ಜನಜೀವನದ ರನ್ನಗನ್ನಡಿಯಾಗಬೇಕಲ್ಲದೆ, ಜನತೆಯ ದುಃಖ ಸಮಸ್ಯೆಗಳನ್ನು ಪರಿಹರಿಸಬಲ್ಲ ಸಾಧನವೂ ಆಗಬೇಕೆಂಬ ತತ್ವ ಪ್ರತಿಪಾದಿತವಾಯಿತು’[3]. ಎಂಬುದು ಪ್ರಗತಿಶೀಲ ಸಾಹಿತ್ಯ ವಿಮರ್ಶೆಯ ಬಹುಮುಖ್ಯ ನಿಲುವೂ ಹೌದು. ಆದ್ದರಿಂದ ಪ್ರಗತಿಶೀಲ ವಿಮರ್ಶೆ ಜನಪರ ನಿಲುವುಗಳನ್ನು ಒಳಗೊಂಡಿತ್ತು ಎನ್ನಬಹುದು.

ಅ.ನ.ಕೃ ಅವರು ಸಾಹಿತ್ಯ ಪ್ರಕಾರಗಳ ಸ್ವರೂಪ ಮತ್ತು ಸಾಧ್ಯತೆಗಳನ್ನು ಕುರಿತು ಬರೆದರು. “ಸಣ್ಣಕಥೆಯಲ್ಲಿ ನಾವು ಹೆಚ್ಚಾಗಿ ನಿರೀಕ್ಷಿಸುವುದು ವಸ್ತು ಪ್ರಾಧಾನ್ಯವನ್ನಲ್ಲ ತಂತ್ರ ನೈಪುಣ್ಯವನ್ನು, ವಸ್ತು ವೈಪುಲ್ಯವುಳ್ಳ ಸಣ್ಣಕಥೆ ಕಿರು ಕಾದಂಬರಿಯಾಗುತ್ತದೆ. ಒಂದು ದೃಶ್ಯ, ಅನುಭವ, ವ್ಯಕ್ತಿಯನ್ನಷ್ಟೇ ಚಿತ್ರಿಸುವ ಕಥೆಗಾಗ ಅತ್ಯಲ್ಪ ವೇಳೆಯಲ್ಲಿ ನಮ್ಮ ಚಿತ್ತವನ್ನು ಸೆರೆಹಿಡಿಯಲು ಸಮರ್ಥನಾಗಿರಬೇಕು”[4]. ಹೀಗೆ ಸಣ್ಣಕಥೆಯ ಸಾಧ್ಯಾಸಾಧ್ಯತೆಗಳನ್ನು ಕುರಿತು ಅವರು ಗಂಭೀರ ಚಿಂತನೆ ಮಾಡಿದರು. ಅಷ್ಟೇ ಅಲ್ಲದೆ ಸಾಕಷ್ಟು ವಿನೂತನ ಆಲೋಚನೆಗಳನ್ನು ಮಂಡಿಸಿದ್ದಾರೆ. ಅ.ನ.ಕೃ ವಿಮರ್ಶಕರನ್ನು ಕುರಿತು ಹೀಗೆ ಬರೆಯುತ್ತಾರೆ: “………….. ಕವಿಯ ದೃಷ್ಟಿಯನ್ನು ತಾವು ಅರಿಯುವುದರ ಬದಲು ತಮ್ಮ ದೃಷ್ಟಿಯನ್ನು ಕವಿ ಪ್ರತಿಪಾಸಲಿಲ್ಲ ಎಂದು ಆಕ್ಷೇಪಿಸುತ್ತಾರೆ. ವಿಮರ್ಶಕನ ಸಂಬಂಧ ಯಾವಾಗಲೂ ತನ್ನ ಮುಂದಿರುವ ಜನತೆಯೊಂದಿಗಿರಬೇಕೇ ವಿನಾ ಕವಿಯೊಂದಿಗಲ್ಲ”[5]. ಎಂದು ವಿಮರ್ಶಕ ಕೃತಿಯನ್ನು ವ್ಯಾಖ್ಯಾನಿಸುತ್ತಾ, ಓದುಗರಿಗೆ ನೆರವಾಗಬೇಕೆನ್ನುತ್ತಾರೆ. ಅಲ್ಲದೆ, “ಜ್ಞಾನ, ಅಂತಃಕರಣಗಳ ಪ್ರಕ್ರಿಯೆಗಳನ್ನು ಯಾವನು ಚೆನ್ನಾಗಿ ಮನನಮಾಡಿಕೊಂಡು ಕ್ರಿಯಾವಂತರ ಮುಚ್ಚಿರುವ ಆಸೆ ಆಶಯಗಳನ್ನು ಬಿಚ್ಚಿ ಹೇಳಬಲ್ಲನೋ ಅವನು ವಿಮರ್ಶಕನೆಂದೆನಿಸಿಕೊಳ್ಳುತ್ತಾನೆ”[6]. ಎಂದು ಅಭಿಪ್ರಾಯಪಡುತ್ತಾರೆ. ಹೀಗೆ ಸೈದ್ಧಾಂತಿಕವಾಗಿ ಖಚಿತ ರೂಪುಪಡೆದ ಅವರ ವಿಮರ್ಶೆ ಕೇವಲ ಅವರ ನಿಲುವುಗಳ ಸಮರ್ಥನೆಗಾಗಿ ಮಾತ್ರ ಉಳಿದು ಬಿಡುತ್ತದೆ. “…..ವಿಲಾಸದ ದಾರಿಯಲ್ಲಿ ವಿಕಾಸವನ್ನು ಯಾವುದು ಸಾಧಿಸುವುದೋ ಅದನ್ನೇ ಸಾಹಿತ್ಯವೆಂದು ಕರೆಯಬಹುದು”[7]. ಎಂದಿರುವ ಅವರು ಸಾಹಿತ್ಯ ಪ್ರಗತಿ ಪರವಾದ ಆಶಯಗಳನ್ನು ಒಳಗೊಂಡಿರಬೇಕು ಎಂಬ ನಿಲುವಿಗೆ ಬರುತ್ತಾರೆ. ಹೀಗಾಗಿ ನವೋದಯ ಸಾಹಿತ್ಯದ ನಿಲುವುಗಳನ್ನು ವಿರೋಧಿಸಿ, ವಿಕಾಸದ ಕನಸು ಕಂಡರು. “ನಾಟಕವೆಂದರೆ, ಎಂದೋ ಒಮ್ಮೆ ನೋಡಿ ಮರೆತು ಬಿಡುವ ವಿಲಾಸ ಸಾಧನವಲ್ಲ. ನಾಟಕದ ಆದರ್ಶ ಭವ್ಯವಾದುದು, ಗುರುತರವಾದುದು. ದೇಶದ ಸಂಸ್ಕೃತಿಯ ಹೆಗ್ಗುರುತೆಂದರೆ ನಾಟಕ; ದೇಶದ ಸಂಸ್ಕೃತಿಯ ವಿಕಾಸಕ್ಕೆ ನಾಟಕವು ಕೊಡುವಷ್ಟು ಇಂಬು ಬೇರೆ ಯಾವ ಸಾಧನವೂ ಕೊಡಲು ಶಕ್ಯವಿಲ್ಲ. ಮನಸ್ಸನ್ನು ಮುದಗೊಳಿಸುತ್ತ, ವಿಚಾರದ ಹಾದಿಯಲ್ಲಿ ಮಾನವನ ವಿಕಾಸವನ್ನು ಸಾಧಿಸುವುದೇ ನಾಟಕ”[8] ಎಂದು ಅಭಿಪ್ರಾಯಪಡುತ್ತಾರೆ. ಅವರ ವಿಮರ್ಶೆಯ ಬಹುಮುಖ್ಯ ಅಂಶವೆಂದರೆ, ಸಾಹಿತ್ಯ ಪ್ರಕಾರಗಳನ್ನು ಸೈದ್ಧಾಂತಿಕವಾಗಿ ಖಚಿತಪಡಿಸಿದ್ದು.

ಅ.ನ.ಕೃ ಅವರು ತಮ್ಮ ವಿಮರ್ಶಾಬರಹಗಳ ಮೂಲಕ ಪ್ರಗತಿಶೀಲ ಚಳವಳಿಯ ಪ್ರಚಾರವನ್ನು ಕೈಗೊಂಡದ್ದಲ್ಲದೆ, ನಾಡು-ನುಡಿಯ ಬಗೆಗಿನ ಅಭಿಮಾನವನ್ನು ಹೆಚ್ಚಿಸಿದರು. “ಸಮಕಾಲೀನ ಸಾಹಿತ್ಯದ ಮೇಲು ಮುಸುಕಿದ್ದ ಅಂಧಕಾರವನ್ನು ನೀಗಿಸಿ, ಹೊಸಬರಹಗಾರರನೇಕರನ್ನು ಬೆಳಕಿಗೆ ತಂದ ಕೀರ್ತಿ ಪ್ರಗತಿಶೀಲ ಲೇಖಕರ ಸಂಘದ್ದು”[9] ಅಲ್ಲದೆ, “ಸಾಹಿತ್ಯ ಜನತೆಯ ವಾಣಿಯಾಗಬೇಕೆಂದು ಪ್ರಗತಿಶೀಲರು ವಾದಿಸಿದರು”[10]. ಗಾಂಧೀಜಿಯವರನ್ನು ಆರಾಧಿಸುವ ಅ.ನ.ಕೃ ಹೀಗೆ ಹೇಳುತ್ತಾರೆ: “ಏಕೀಕೃತವಾದ ಕರ್ನಾಟಕ ಭಾರತದ ಒಂದು ಅಂಗವಾಗಿ, ಗಾಂಧೀಜಿಯವರು ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನನುಸರಿಸ ಬೇಕೆಂಬುದೇ ಅವರ ಉತ್ಕಟಾಕಾಂಕ್ಷೆ”[11]. “ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಸಾಹಿತ್ಯದ ಪಡಿಯಚ್ಚು ಮಾಡಿಬಿಟ್ಟರೆ ತಮ್ಮ ಕರ್ತವ್ಯ ಮುಗಿಯಿತು ಎನ್ನುವ ಮನೋಭಾವ ಈ ಕಾಲದ ಸಾಹಿತಿಗಳಲ್ಲಿ ಕಂಡು ಬಂತು”[12] ಎಂದು ನವೋದಯ ಸಾಹಿತ್ಯದ ಬಗೆಗಿನ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ನವೋದಯ ಸಾಹಿತ್ಯ ಸಮಕಾಲೀನ ಬದುಕಿನ ಸ್ಪಂದನ

ಶಕ್ತಿಯನ್ನು ಕಳೆದುಕೊಂಡಾಗ ಪ್ರಗತಿಶೀಲರು ಬಡವರು ಕೆಳವರ್ಗದವರ ಬದುಕನ್ನು ದಾಖಲಿಸಿದರು. “ಎಲ್ಲಾ ಸಾಹಿತ್ಯ ಕಲೆಗಳ ಉಗಮಕ್ಕೂ ಸಾಮಾನ್ಯ ಜನತೆಯೇ ಮೂಲ”[13] ಎಂಬುದು ಅವರ ನಿಲುವಾಗಿತ್ತು. ಅ.ನ.ಕೃ ಅವರು ಸೃಜನಶೀಲ ಸಾಹಿತ್ಯ ಪ್ರಕಾರಗಳ ಸಾಧ್ಯಾಸಾಧ್ಯತೆಗಳಿಗಿಂತ, ತಮ್ಮ ಕೃತಿ, ನಿಲುವುಗಳ ಕಡೆ ಹೆಚ್ಚು ಒತ್ತು ಕೊಡುತ್ತಾರೆ. ಪ್ರಗತಿಶೀಲರು ನಾಸ್ತಿಕರು, ದೇವರಿಲ್ಲ ಎನ್ನುತ್ತಾರೆ. ರಾಮಾಯಣ ಭಾರತಗಳನ್ನು ತೆಗಳುತ್ತಾರೆ ಎಂಬ ಆಪಾದನೆಯನ್ನು ತಳ್ಳಿಹಾಕುತ್ತಾರೆ. ಅವರ ಸಮರ್ಥನೆ ಹೀಗಿದೆ: “ರಾಮಾಯಣ, ಭಾರತಗಳನ್ನು ಒಪ್ಪಿಕೊಳ್ಳದಿರುವುದು ನಾಸ್ತಿಕತೆಯ ಲಕ್ಷಣವಾದರೆ ಪ್ರಾಚೀನ ಜೈನ, ವೀರಶೈವ ಕವಿಗಳೆಲ್ಲಾ ನಾಸ್ತಿಕರಾಗುತ್ತಾರೆ. ರಾಮಾಯಣ, ಭಾರತಗಳ ಚರ್ವಿತ ಚರ್ವಣ ಸಾಕು ………….. ರಾಮಾಯಣ, ಭಾರತ ನಮಗೆ ಬೇಕು. ಆದರದೇ ಸಾಕು ಎಂಬುದು ತಪ್ಪು. ಇದೇ ಪ್ರಗತಿಶೀಲವಾದ”[14]. ನಾಸ್ತಿಕರು ಎಂಬ ಆಪಾದನೆಗೆ ಉತ್ತರಿಸುತ್ತಾ “ಪ್ರಗತಿಶೀಲರು ನಾಸ್ತಿಕರಲ್ಲ. ಆದರೆ ನವೋದಯವಾದಿಗಳು ಅರ್ಥಮಾಡಿಕೊಂಡಿರುವ ರೀತಿಯ ಆಸ್ತಿಕರೂ ಅಲ್ಲ, ಪ್ರಗತಿಶೀಲರ ದೇವರಿಗೆ ಮೂರು ತಲೆಯೂ ಇಲ್ಲ, ಹದಿನಾರು ಕೈಯೂ ಇಲ್ಲ. ಅವನು ನಾಗಭೂಷಣನೂ ಅಲ್ಲ, ಶೇಷಶಾಯಿಯೂ ಅಲ್ಲ, ಮನುಷ್ಯ ಯಾವಾಗ ದೇವರನ್ನು ತನ್ನ ಮಟ್ಟಕ್ಕೆ ಇಳಿಸಿ ಅವನಿಗೆ ಕೈಕಾಲು ಕೊಟ್ಟು, ಮುಂಜಿ ಮದುವೆ ಮಾಡಿಸಿದನೋ ಆಗ ದೇವರು ಸ್ಥಾನ ಭ್ರಷ್ಟನಾದನು” [15] ಎಂದು ನೇರವಾಗಿ ನವೋದಯ ಸಾಹಿತ್ಯದ ನಂಬಿಕೆಗಳನ್ನು ಭಂಜಕಗೊಳಿಸುತ್ತಾರೆ. ಮೂಢನಂಬಿಕೆಗಳಿಂದ ದೂರಸರಿದ ದೈವ ಕಲ್ಪನೆಯನ್ನು ಒಪ್ಪುವ ಪ್ರಗತಿಶೀಲರಿಗೆ ಮಾನವೀಯ ಮೌಲ್ಯಗಳ ಶೋಧ ಮುಖ್ಯವಾಯಿತು. ಪ್ರಗತಿಶೀಲರು ಕಮ್ಯುನಿಸ್ಟರು ಎಂಬ ಆಪಾದನೆಯ ವಿಚಾರದಲ್ಲಿ ಅ.ನ.ಕೃ ಮತ್ತು ನಿರಂಜನರ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಯಾವ ದೇಶದಿಂದಲೂ ಭಾರತದ ಉದ್ಧಾರ ಸಾಧ್ಯವಿಲ್ಲ. ಆದರೆ ಜನಪರ ವ್ಯವಸ್ಥೆಯ ನಿರ್ಮಾಣಕ್ಕೆ ಇತರರ ತಂತ್ರಗಳ ಅಗತ್ಯವಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅ.ನ.ಕೃ ನೆಹರೂ ಚಿಂತನೆಗಳನ್ನು ಒಪ್ಪಿದರೆ, ಆ ಬಗ್ಗೆ ಕೆಲವು ಪ್ರಗತಿಶೀಲ ಬರಹಗಾರರಲ್ಲಿ ವಿರೋಧವಿತ್ತು. ಇಂಥ ಅನೇಕ ಭಿನ್ನಾಭಿಪ್ರಾಯಗಳು ಪ್ರಗತಿಶೀಲ ಚಳವಳಿಯ ಒಡಕಿಗೆ ಕಾರಣವಾಯಿತೆಂಬದು ತಿಳಿದ ವಿಷಯವೇ ಆಗಿದೆ.

ಅಶ್ಲೀಲೋಪಾಸಕರೆಂಬುದು ಪ್ರಗತಿಶೀಲರ ಮೇಲೆ ಬಂದ ಬಹುದೊಡ್ಡ ಆಪಾದನೆ, ಅ.ನ.ಕೃ ಅವರು ಈ ಆಪಾದನೆಯನ್ನು ತಳ್ಳಿಹಾಕಿ, ಜೊಸೆಫ್ ಫ್ರೀಮನ್ನರ ಮಾತುಗಳ ಮೂಲಕ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ. ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಆದರ್ಶ ಮತ್ತು ಸಾಹಿತ್ಯಗಳಿರುವಂತೆ, ಶ್ರಮಜೀವಿಗಳಿಗೂ ಪ್ರತ್ಯೇಕವಾದ ಆದರ್ಶ ಮತ್ತು ಸಾಹಿತ್ಯಗಳಿವೆ ಎಂಬ ನಂಬುಗೆ ಅವರದಾಗಿತ್ತು. “ಪ್ರಗತಿಶೀಲ ಸಾಹಿತ್ಯವನ್ನು ಸಂಪೂರ್ಣ ಓದದವರು ಈ ನಿರ್ಣಯಕ್ಕೆ ಬರುತ್ತಾರೆ. ಅಶ್ಲೀಲವನ್ನು, ಅನೀತಿವ್ಯಾಪಾರವನ್ನು ಸಮಾಜದ ಹಿತಚಿಂತಕ ಸಾಹಿತಿ ತೋರಿಸಲೇಬೇಕು. ರೇಷ್ಮೆ ವಸ್ತ್ರವನ್ನು ಸರಿಸಿ ಒಳಗಿರುವ ನಾತವನ್ನು ಪರಿಚಯಿಸಬೇಕು. ಸಮಾಜ ವಿಮರ್ಶೆ, ಸತ್ಯಕಥಾನಿರೂಪಣೆ ಅಶ್ಲೀಲವಾದರೆ ಗಾಂಧಿಯ ಹರಿಜನ ಪತ್ರಿಕೆ, ಷೇಕ್ಸ್'ಪಿಯರನ ನಾಟಕಗಳು, ಕಾಳಿದಾಸನ ಕೃತಿಗಳು, ಷೆಲ್ಲಿ, ರತ್ನಾಕರವರ್ಣಿ, ಸರ್ವಜ್ಞ ಇವರ ಕಾವ್ಯಗಳೂ ಅಶ್ಲೀಲವಾಗುತ್ತವೆ. ಗಾರ್ಕಿ, ರಸಋಷಿ, ಭಾರತಶಕ್ತಿ ಇವುಗಳನ್ನು ನವೋದಯದವರ ಕೃತಿಗಳೊಂದಿಗೆ ಹೋಲಿಸಿದರೆ ಅಶ್ಲೀಲ ಯಾರದೆಂಬುದು ತಿಳಿಯಬಹುದು” [16] ಎಂದಿದ್ದಾರೆ. ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಇಂಗ್ಲಿಷ್ ಸಾಹಿತ್ಯ ಕೃತಿಗಳನ್ನು ಉಲ್ಲೇಖಿಸುತ್ತಾ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. “ಲೇಖಕ ಶ್ರಮಜೀವಿಗಳ ವಿಶ್ವಾಸಿಯೆ? ಬಂಡವಾಳಗಾರರ ಕಹಳೆಯೆ ಎಂಬುದೊಂದು ಮಹತ್ವದ ಪ್ರಸ್ತಾನ. ಅವನ ದೃಷ್ಟಿಯನ್ನು ಯಾವ ತತ್ವ, ಯಾವ ಗುರಿ, ಯಾವ ದರ್ಶನ ವ್ಯಾಪಜಿಸಿದೆಯೆಂಬುದನ್ನು ವಿಮರ್ಶಕ ತನ್ನ ಕ್ಷ-ಕಿರಣ ಶಕ್ತಿಯಿಂದ ಕಂಡುಕೊಳ್ಳುವವನಾಗಬೇಕು” [17]. ಬರಹಗಾರ ಆಯ್ದುಕೊಳ್ಳುವ ವಸ್ತು ಯಾರ ಪರವಾಗಿದೆ ಎಂಬುದು ಮುಖ್ಯ. ಹೀಗಾಗಿ, ವಸ್ತುವಿನ ಆಯ್ಕೆಯು ಬರಹಗಾರನ ತಾತ್ವಿಕ ನಿಲುವನ್ನು ಸೂಚಿಸುತ್ತದೆ ಎಂಬುದು ಅವರ ಅಭಿಮತ. 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' (1943)

ಕೃತಿಯಲ್ಲಿ ವೀರಶೈವ ಸಾಹಿತ್ಯ, ಅನುಭವ ಮಂಟಪ, ಹರಶ್ಚಂದ್ರ ಕಾವ್ಯ, ಸರ್ವಜ್ಞನನ್ನು ಕುರಿತ ಲೇಖನಗಳಿವೆ. ಬಸವಣ್ಣನವರ ಬಾಲ್ಯ, ಯೌವನ, ಅಧಿಕಾರ, ಸಂಸಾರ, ಸಂಸಾರದ ನಿರಸನ, ಸಾಧನಯೋಗ, ಶರಣಸತಿ-ಲಿಂಗಪತಿ, ರಾಜಸೇವಾಸಕ್ತ, ಧರ್ಮಸಂಸ್ಥಾಪನೆ, ಸಮಾಜ, ಅನುಭವ ಮಂಟಪ, ಮಹಾಕ್ರಾಂತಿ- ಈ ವಿಚಾರಗಳನ್ನು ಕುರಿತ ವಚನಗಳನ್ನು ಉಲ್ಲೇಖಿಸುತ್ತಾ ವಿವರಣಾತ್ಮಕವಾಗಿ ಬರೆದಿದ್ದಾರೆ. ಅನೇಕ ವಿವಾದಗಳ ಕೇಂದ್ರ ಬಿಂದುವಾಗಿದ್ದ ಅ.ನ.ಕೃ ಚಿಂತಿಸಿದ್ದು ಹೀಗೆ: "ಅಭಿಪ್ರಾಯ ಭೇದಗಳು ಅರಿವಿನ ಕಣದಲ್ಲೇ ವಿನಾ ವ್ಯಕ್ತಿಜೀವನದಲ್ಲಿಲ್ಲ. ತಿಳಿವಿನತಳ ತಡಕುವುದಕ್ಕೆ ಕಷ್ಟಪಟ್ಟ ಯಾರೂ ಇತರರ ಕಷ್ಟವನ್ನು ತೆಗಳುವುದಿಲ್ಲ. ಕಿರಿದೆಂದು ಭಾವಿಸುವುದಿಲ್ಲ"[18].

'ನಗ್ನಸತ್ಯ', 'ಶನಿಸಂತಾನ', 'ಸಂಜೆಗತ್ತಲು' ಕಾದಂಬರಿಗಳ ವಿರುದ್ಧ ಬಂದ ಟೀಕೆಗಳಿಗೆ 'ಸಾಹಿತ್ಯ ಮತ್ತು ಕಾಮಪ್ರಚೋದನೆ' (1952) ಕೃತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಬಡವರು, ಶ್ರಮಿಕವರ್ಗ, ಸ್ತ್ರೀಪರವಾದ ಅವರ ಕಾಳಜಿಯನ್ನು ಯಾರೂ ಪ್ರಶ್ನಿಸಲಾರರು. ಆದರೆ ಅವರು ತಮ್ಮ ವಿರುದ್ಧ ಬಂದ ಟೀಕೆಗಳನ್ನು ನಿರಾಕರಿಸಿ, ತಮ್ಮನ್ನು ಸಮರ್ಥಿಸಿಕೊಳ್ಳಲು ಹೆಚ್ಚು ಬಯಸುತ್ತಾರೆ. ಪ್ರಗತಿಶೀಲರು ಅಶ್ಲೀಲೋಪಾಸಕರೆಂಬ ಟೀಕೆಗೆ ಅ.ನ.ಕೃ ಹಾಕಿದ ಸವಾಲುಗಳಿವು;

1. ಸಂತಾನವೆಂದರೇನು? ತಾಯಿಯ ಗರ್ಭದಲ್ಲಿರುವ ಪಿಂಡವೇ ಅಥವಾ ಬ್ರಹ್ಮಾಂಡದಲ್ಲಿರುವ ಸಕಲ ಚರಾಚರ ಸೃಷ್ಟಿಯೇ?
2. ಕಾಮೋದ್ದೀಪಕ ಸಾಹಿತ್ಯವನ್ನು ಓದುವುದರಿಂದ 8-10ವರ್ಷದ ಮಗುವಿಗೆ ಕಾಮ ಪ್ರಚೋದನೆಯಾಗುತ್ತದೆಯೇ? 60-70 ವರ್ಷದ ಮುದುಕನಿಗೆ, ಕಾಮ ಪ್ರಚೋದನೆಯಾಗುತ್ತದೆಯೇ?
3. ಜನ್ನನ 'ಯಶೋಧರ ಚರಿತೆ', ಹರಿಹರ 'ಗಿರಿಜಾಕಲ್ಯಾಣ', ಲಕ್ಷ್ಮೀಶನ 'ಜೈಮಿನಿಭಾರತ' ಅನೇಕ ತರಗತಿಗಳಿಗೆ ಪಠ್ಯಪುಸ್ತಕವಾಗಿದ್ದವು. ಅವುಗಳನ್ನೋದಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಆಗಿರುವ ಅನರ್ಥಗಳು ಯಾವುವು?
4. ಭಾಷಾ ಸಾಹಿತ್ಯಗಳನ್ನೋದಿದವರಿಗೆ ಕಾಮಪ್ರಚೋದನೆಯಾಗುವುದಿಲ್ಲವೇ? ಅಂಥವರ ವಿಷಯ ಕತೆ-ಕಾದಂಬರಿಕಾರರ ಸಮ್ಮೇಳನದವರು ಏನು ಮಾಡಲು ನಿಶ್ಚಯಿಸಿದ್ದಾರೆ?
5. ಹಿಂದೂ ಮದುವೆಗಳಲ್ಲಿ, ಹಬ್ಬಗಳಲ್ಲಿ ಪಠಿಸಲ್ಪಡುವ ಮಂತ್ರಗಳಲ್ಲಿ ಕಾಮ ಪ್ರಚೋದನೆ ಅಡಕವಾಗಿದೆಯಲ್ಲಾ- ಬೈಬಲ್ ತುಂಬ ಕಾಮಪ್ರಚೋದಕ ವಿಷಯ ನಿರೂಪಣೆ ಇದೆಯೆಲ್ಲಾ - ರತ್ನಾಕರವರ್ಣಿಯ 'ಭರತೇಶವೈಭವ' ಕಾವ್ಯವನ್ನು ಜೈನರು ಮನೆಗಳಲ್ಲಿ ಪಾರಾಯಣ ಮಾಡುವರಲ್ಲಾ - ಇದನ್ನು ತಡೆಗಟ್ಟುವ ಬಗೆ ಹೇಗೆ? [19]

ಪ್ರಾಚೀನ ಸಾಹಿತ್ಯ ಮತ್ತು ವಿವಾಹ ಸಂದರ್ಭಗಳಲ್ಲಿ ಪಠಿಸುವ ಮಂತ್ರಗಳನ್ನು ಮುಂದಿಟ್ಟುಕೊಂಡು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ಇಡೀ ಪ್ರಗತಿಶೀಲ ಚಳವಳಿಯ ಕಾಲದಲ್ಲಿ ಇಂತಹ ಆಪಾದನೆಯನ್ನು ಎದುರಿಸಬೇಕಾಗಿ ಬಂದದ್ದು ಅ.ನ.ಕೃ ಅವರಿಗೆ ಮಾತ್ರ ಎಂಬುದು ಗಮನಾರ್ಹ. 'ನಗ್ನಸತ್ಯ' ಮಾಲೆಯ ಕಾದಂಬರಿಗಳಲ್ಲಿ ಬರುವ ವೇಶ್ಯಾವಾಟಿಕೆ, ಮೇಜುವಾನಿ, ವಿಕೃತ ಕಾಮ ಇವುಗಳನ್ನು ಅಷ್ಟು ಸುಲಭವಾಗಿ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಮಧ್ಯಮ ವರ್ಗದ ಬಡ ಕೂಲಿ ಕಾರ್ಮಿಕರ, ಶೋಷಿತರ ಪರವಾದ ನಿಲುವುಳ್ಳ ಅ.ನ.ಕೃ ಕಾದಂಬರಿಗಳ ವಸ್ತುವಿನ ಆಯ್ಕೆ ಸಹಜವಾದುದು ಎನಿಸಿದರೂ, "ಪ್ರಗತಿಶೀಲ ಸಾಹಿತಿ ಇದ್ದುದನ್ನು ಇದ್ದಂತೆ ಹೇಳಬೇಕೆಂದು ಬಯಸುತ್ತಾನೆ. ಕಂಡದ್ದನ್ನು ಕಂಡಂತೆ ವರ್ಣಿಸಲು ಬಯಸುತ್ತಾನೆ" [20] ಎಂಬ ನೆಪದಲ್ಲಿ ರೋಚಕವಾದ ವಿವರಣೆಗಳು ಎಷ್ಟರಮಟ್ಟಿಗೆ ಸರಿ ಎನಿಸುತ್ತದೆ. ಸ್ತ್ರೀಪರ ಕಾಳಜಿಯುಳ್ಳ ಅ.ನ.ಕೃ ಅವರ ನಿಲುವುಗಳು ಹೀಗಿವೆ:

1. ಸ್ತ್ರೀಪುರುಷರ ಸ್ಥಾನ ಸಮಾನವಾದುದು. ಗಂಡು ಹೆಚ್ಚು ಹೆಣ್ಣು ಕಡಿಮೆ ಎಂಬ ಭಾವನೆಗೆ ಅರ್ಥವಿಲ್ಲ. ಲೋಕಸೃಷ್ಟಿಗೆ ಪ್ರಕೃತಿ ಪುರುಷರಿಬ್ಬರೂ ಅತ್ಯವಶ್ಯಕ.
2. ಸ್ತ್ರೀಯ ಪೂರ್ಣ ವಿಕಾಸಕ್ಕೆ ಅವಕಾಶ ಕಲ್ಪಿಸಬೇಕು. ನಮ್ಮ ಪರಂಪರೆ ಸ್ತ್ರೀಯನ್ನು ಕೇವಲ 'ಸಂತಾನ ಯಂತ್ರ' ವನ್ನಾಗಿ ನೋಡಿದೆ.

3. ಸ್ತ್ರೀಯ ವಿಕಾಸ ಸ್ತ್ರೀತ್ವಕ್ಕೆ ಸಹಜವಾದ ರೀತಿಯಲ್ಲಿ ಆಗಬೇಕು.
4. ಇಂದಿನ ಯಾಂತ್ರಿಕ ನಾಗರಿಕತೆ 'ಗೃಹಛಿದ್ರ' ಕ್ಕೆ ಕಾರಣವಾಗಿದೆ [21]

'ಸಜೀವ ಸಾಹಿತ್ಯ' (1946), 'ಸಾಹಿತ್ಯ ಮತ್ತು ಯುಗಧರ್ಮ' (1952), 'ಸಂಸ್ಕೃತಿಯ ವಿಶ್ವರೂಪ' (1955), 'ಸಾರ್ಥಕ ಸಾಹಿತ್ಯ' (1966) ಕೃತಿಗಳಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಮೀಮಾಂಸೆಗೆ ಸಂಬಂಧಿಸಿದ ಲೇಖನಗಳಿವೆ. ಸಜೀವ ಸಾಹಿತ್ಯದಲ್ಲಿ ಬಸವ, ಅಲ್ಲಮ, ಸರ್ವಜ್ಞ, ಕೈಲಾಸಂ ಅವರ ವ್ಯಕ್ತಿಚಿತ್ರಣಗಳಿವೆ. ಅಲ್ಲದೆ ಸಂಸ್ಕೃತಿ ಮತ್ತು ಸಾಹಿತ್ಯ ಪ್ರಕಾರಗಳಾದ ನಾಟಕ, ಕಾದಂಬರಿ ಹಾಗೂ ಲಲಿತ ಕಲೆಗಳ ಪ್ರಸ್ತಾಪವೂ ಇದೆ. ಅ.ನ.ಕೃ ಅವರ ಬರವಣಿಗೆಯಲ್ಲಿ ಹಿಂದಿನ ಸಾಹಿತ್ಯದ ಬಗೆಗಿನ ಅಸಹನೆ ಕಟುವಾಗಿಯೇ ವ್ಯಕ್ತವಾಗಿದೆ. "ಭಾರತೀಯ ಕವಿಗಳ 'ಕರ್ಮವಾದ' ಕೇವಲ ಸಾಹಿತ್ಯ, ದರ್ಶನ ಪ್ರಪಂಚದಲ್ಲಿಯೇ ನಿಂತಿದ್ದರೆ ನಾವು ದುಃಖಪಡಬೇಕಾಗಿರಲಿಲ್ಲ. ಅದು ಭಾರತೀಯ ಜೀವನದ ಸಮಸ್ತ ವಾಹಿನಿಯಲ್ಲಿಯೂ ಪ್ರವಹಿಸಿತು. ಜನತೆಗೆ ಸುಳ್ಳು ವೈರಾಗ್ಯ ಬೋಧಿಸಿತು. ಆ ಸುಳ್ಳು ವೈರಾಗ್ಯ ಕಾಲಕಾಲಕ್ಕೆ ಭಾರತವನ್ನು ತುರುಕರು, ಮುಘಲರು, ಫ್ರೆಂಚರು, ಡಚ್ಚರು, ಆಂಗ್ಲರು ಮೊದಲಾದವರ ಪಾದತಲದಲ್ಲಿ ಹಾಕುತ್ತ ಬಂತು"[22] ಭಾರತೀಯ ದರ್ಶನ, ವೇದಾಂತಗಳು ವಾಸ್ತವದ ಸಮಸ್ಯೆಗಳಿಗೆ ಸ್ಪಂದಿಸದೇ ಹೋದಾಗ ಈ ಬಗೆಯ ವಿರೋಧ ಅನಿವಾರ್ಯವಾಯಿತು. 'ಸಜೀವ ಸಾಹಿತ್ಯ' ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಒಳಗೊಂಡಿದೆ. ಅಲ್ಲಿ ತಮ್ಮ ನಿಲುವುಗಳನ್ನು ಹೀಗೆ ಘೋಷಿಸಿದ್ದಾರೆ; "ಸಮಾಜದ ದಿಗ್ದರ್ಶನಕ್ಕೆ ಹೊರಟ ಸಾಹಿತಿ ತಾನು ಕಂಡ ಸತ್ಯವನ್ನು ಬಿಚ್ಚುಮಾತಿನಿಂದ ನುಡಿದರೆ ಅದು ಅಶ್ಲೀಲವಾಗುವುದಿಲ್ಲ. ಸಮಾಜ ಶರೀರದ ಒಳಗೆ ಹುದುಗಿ, ಅದರ ಮೂಳೆ ಮೂಳೆಯನ್ನು ಕೊರೆಯುತ್ತಿರುವ ಅಶ್ಲೀಲವನ್ನೂ ಅನೀತಿಯನ್ನು ಸಮಾಜದ ಹಿತಚಿಂತಕನಾದ ಸಾಹಿತಿ ಎತ್ತಿ ತೋರಿಸಬೇಕು. ಅದರ ಮೇಲೆ ಮುಸುಕಿರುವ ರೇಷ್ಮೆ ವಸ್ತ್ರವನ್ನು ಸರಿಸಿ, ಒಳಗೆ ಕೊಳೆ ನಾರುತ್ತಿದೆಯೆಂಬುದನ್ನು ಲೋಕಕ್ಕೆ ಪರಿಚಯ ಮಾಡಿಕೊಡಬೇಕಾಗುತ್ತದೆ. ಈ ಜಲಗಾರ ವೃತ್ತಿಯನ್ನು ಅವಲಂಬಿಸಿದ ಸಾಹಿತಿ ಅದರಲ್ಲಿ ವಿಲೀನವಾಗಿ ಕೊಳಚೆಯಲ್ಲೇ ಕಮಲದ ಸೌರಭವನ್ನು ಕಾಣುತ್ತಾನೆಂದು ಹೇಳುವುದು ಸತ್ಯದ ವಿಪರ್ಯಾಸ" [23] ಎಂಬ ಮಾತುಗಳಲ್ಲಿ ಪ್ರಗತಿಶೀಲ ಚಳವಳಿಯ ಸೈದ್ಧಾಂತಿಕ ನಿಲುವುಗಳನ್ನು ವ್ಯಕ್ತಪಡಿಸಿ, ಹೊಸ ಸಾಹಿತ್ಯದ ಅನಿವಾರ್ಯತೆಯನ್ನು ಖಚಿತಪಡಿಸಿದರು. ರಮ್ಯಸಂಪ್ರದಾಯಕ್ಕೆ ಪ್ರತಿಕ್ರಿಯಿಸುತ್ತಾ "ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು, ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ, ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತಿ, ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ" [24]ಎಂದು ನುಡಿದರು.

**ಸಮಾರೋಪ**

ಅ.ನ.ಕೃ ಅವರ ವಿಮರ್ಶೆಯ ನಿಲುವುಗಳನ್ನು ಹೀಗೆ ಕ್ರೋಢೀಕರಿಸಬಹುದು:

1. ಸಾಹಿತ್ಯದಂತೆ ವಿಮರ್ಶೆಯು ಜನಪರ ನಿಲುವಿಗೆ ಬದ್ಧವಾಗಿರಬೇಕು.
2. ವಸ್ತುವಿನ ಆಯ್ಕೆಯೇ ಬರಹಗಾರನ ತಾತ್ವಿಕತೆಯನ್ನು ಸೂಚಿಸುತ್ತದೆ.
3. ನೆಹರೂ ಚಿಂತನೆಗಳನ್ನು ಅ.ನ.ಕೃ ಒಪ್ಪಿಕೊಳ್ಳುತ್ತಾರೆ.
4. ಅ.ನ.ಕೃ ಅವರ ಬರವಣಿಗೆಯಲ್ಲಿ ಗಾಂಧೀಜಿಯವರ ಪ್ರಭಾವವನ್ನು ಕಾಣಬಹುದು.
5. ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಆದರ್ಶ ಮತ್ತು ಸಾಹಿತ್ಯಗಳಿರುವಂತೆ ಶ್ರಮಜೀವಿಗಳಿಗೂ ಪ್ರತ್ಯೇಕ ಆದರ್ಶ ಮತ್ತು ಸಾಹಿತ್ಯವಿದೆ ಎಂಬುದು ಅವರ ನಂಬಿಕೆ.
6. ಅವರ ಬರವಣಿಗೆಯಲ್ಲಿ ಜಾತಿ, ಮತ, ಧರ್ಮ ಇವೆಲ್ಲವನ್ನೂ ಮೀರಿದ ಮಾನವೀಯತೆ ಅಂತಸ್ಥವಾಗಿದೆ.
7. ಅವರ ವಿಮರ್ಶೆ ವೈಯಕ್ತಿಕ ಟೀಕೆ, ವಿವಾದಗಳ ಮಟ್ಟದಲ್ಲಿ ನಿಂತುಬಿಡುತ್ತದೆ.

**ಕೊನೆಟಿಪ್ಪಣಿಗಳು**

1. ಸಾಹಿತ್ಯ ಸಮಾರಾಧನ ಪುಟ. 33
2. ಅದೇ ಪುಟ.50
3. ಅದೇ
4. ಅದೇ ಪುಟ.61
5. ಸಾಹಿತ್ಯ ಮತ್ತು ಜೀವನ ಪುಟ.14
6. ಅದೇ ಪುಟ. 50
7. ಸಾಹಿತ್ಯ ಮತ್ತು ಜೀವನ ಪುಟ. 79
8. ಅದೇ ಪುಟ.119
9. ಸಾಹಿತ್ಯ ಮತ್ತು ಸಂಸ್ಕೃತಿ ಪುಟ. 8
10. ಅದೇ
11. ಅದೇ ಪುಟ.9
12. ಅದೇ ಪುಟ.22
13. ಸಾಹಿತ್ಯ ಮತ್ತು ಸಂಸ್ಕೃತಿ ಪುಟ.26
14. ಅದೇ ಪುಟ. 28
15. ಅದೇ
16. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪುಟ.32-33
17. ಅದೇ ಪುಟ.37
18. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಮುನ್ನಡಿ
19. ಸಾಹಿತ್ಯ ಮತ್ತು ಕಾಮಪ್ರಚೋದನೆ ಪುಟ. 156
20. ಅದೇ ಪುಟ.281
21. ಅದೇ ಪುಟ.281-281
22. ಸಜೀವ ಸಾಹಿತ್ಯ ಪುಟ.30
23. ಅದೇ ಪುಟ. 18
24. ಅದೇ ಪುಟ.5

**ಉಲ್ಲೇಖಗಳು**

1. ಆಮೂರ ಜಿ.ಎಸ್. - ಅ.ನ.ಕೃಷ್ಣರಾಯರು, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ
2. ಡಾ.ವಿದ್ಯಾಶಂಕರ (ಸಂ) - ಸಹೃದಯ ಸಂವಾದ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು